(ಇಂದು ದಿನಾಂಕ:11-12-2025  ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರ ಪರ ವಕೀಲರಿಂದ :-**

ನಾನು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ಕೆಳಕಂಡ ದಾಖಲಾತಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈ ಕೆಳಕಂಡಂತೆ ನಿಶಾನೆಯಾಗಿ ಗುರುತಿಸಲಾಯಿತು.

| | |
|---|---|
| ನಿ.ಪಿ.1 | ಸಿಸಿ ನಂ. 1453/2024 ರ ಆದೇಶ ಪುಟದ ದೃಢಿಕೃತ ನಕಲು |
| ನಿ.ಪಿ.2 | ಪ್ರಥಮ ವರ್ತಮಾನ ವರದಿಯ ದೃಢಿಕೃತ ನಕಲು |
| ನಿ.ಪಿ.3 | ದೂರಿನ ಧೃಡಿಕೃತ ನಕಲು |
| ನಿ.ಪಿ.4 | ಸ್ಥಳ ಪಂಚನಾಮೆಯ ಧೃಡಿಕೃತ ನಕಲು |
| ನಿ.ಪಿ.5 | ಹೇಳಿಕೆಗಳ ಧೃಡಿಕೃತ ನಕಲುಗಳು |
| ನಿ.ಪಿ.6 | ಗಾಯದ ಪ್ರಮಾಣ ಪತ್ರದ ಧೃಡಿಕೃತ ನಕಲು |
| ನಿ.ಪಿ.7 | ಶಾಂತಿ ಆಸ್ಪತ್ರೆಯವರು ನೀಡಿರುವ ಆಸ್ಪತ್ರೆಯ ಬಿಡುಗಡೆ ಪತ್ರ |
| ನಿ.ಪಿ.8 | ಅಂಗನ್ಯೂನ್ಯತೆ ಪ್ರಮಾಣ ಪತ್ರ |
| ನಿ.ಪಿ.9 | ರೆಡಿಯಾಲಜಿ ವರದಿ |
| ನಿ.ಪಿ.10 | ಒಟ್ಟು 21 ವೈದ್ಯರ ಸಲಹಾ ಚೀಟಿಗಳು |
| ನಿ.ಪಿ.11 | ಒಟ್ಟು 47 ವೈದ್ಯಕೀಯ ಬಿಲ್ಲುಗಳು |
| ನಿ.ಪಿ.12 | ಒಟ್ಟು 4 ಎಕ್ಸ್ ರೇ ವರದಿಗಳು |

**ಪಾಟೀ ಸವಾಲುಃ ಎದುರುದಾರ ನಂ.3 ರವರ ಪರ ವಕೀಲರಿಂದ.**

1. ಕಾರ ಸಂಖ್ಯೆ ಕೆಎ 36 ಎನ್ 5422 ನನ್ನ ಮಾಲೀಕತ್ವದಲ್ಲಿ ಇರುತ್ತದೆ. ಅಪಘಾತದ ದಿನ ದಿಃ 16-04-2024 ರಂದು ನಾನೇ ಕಾರ ಚಾಲನೆ ಮಾಡುತ್ತಿದ್ದೆ. ನನ್ನ ಚಾಲನಾ ಪರವಾನಿಗೆ ಇಲ್ಲ ಎಂದರೆ ಸರಿಯಲ್ಲ. ಚಾಲನಾ ಪರವಾನಿಗೆಯನ್ನು ನಾನು ನ್ಯಾಯಾಲಯಕ್ಕೆ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ಅಪಘಾತವು ನನ್ನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಕಾರ ವಾಹನಕ್ಕೆ ವಿಮೆ ಇದೆ. ಪ್ರಸ್ತುತ ಪ್ರಕರಣದಲ್ಲಿ ನನ್ನ ಕಾರಿನ ವಿಮಾ ಕಂಪನಿಯವರನ್ನು ಪಕ್ಷಗಾರರನ್ನಾಗಿ

ಮಾಡಿಲ್ಲ ಎಂದರೆ ಸರಿ. ಆದ ಕಾರಣ ಸದರಿ ಅರ್ಜಿ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದ ನಂತರ ನಾನು ಪ್ರಜ್ಞಾ ಹೀನನಾಗಿದ್ದರಿಂದ ಪಿರ್ಯಾದಿಯನ್ನು ನಾನು ನೀಡಿರುವುದಿಲ್ಲ. ನನ್ನ ಮಗ ಹರೀಶ ಗೋವಿಂದ ಇವರು ಪಿರ್ಯಾದಿ ನೀಡಿರುತ್ತಾರೆ. ನನ್ನ ಮಗ ಹರೀಶ ಗೋವಿಂದ ಇವರು ಪೋಲೀಸರ ಜೊತೆ ಶಾಮಿಲಾಗಿ ಸುಳ್ಳು ದೂರು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಅಪಘಾತದ ನಂತರ ನಾನು ಶಾಂತಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನಾನು 16-04-2024 ರಂದು ಶಾಂತಿ ಆಸ್ಪತ್ರೆಗೆ ದಾಖಲಾಗಿ 24-04-2024 ರಂದು ಗುಣಮುಖವಾದ ನಂತರ ನನ್ನನ್ನು ಬಿಡುಗಡೆ ಮಾಡಿರುತ್ತಾರೆ ಎಂದರೆ ಸರಿ. ಅಪಘಾತದಲ್ಲಿ ನನಗೆ ಶಸ್ತ್ರ ಚಿಕಿತ್ಸೆ ಆಗಿದ್ದು, ನನ್ನ ಬಲಗಾಲು ಮತ್ತು ಬಲಗೈಗೆ ರಾಡ್ ಮತ್ತು ಪ್ಲೇಟಗಳನ್ನು ಹಾಕಿರುತ್ತಾರೆ. ಡಿವಿಸಿ ಆಸ್ಪತ್ರೆ ಗುಂಟೂರು ಆಸ್ಪತ್ರೆಯಲ್ಲಿ ಮೊಣಕಾಲು ಕೆಳಗೆ ಹಾಕಿರುವ ರಾಡ್‌ನ್ನು ತೆಗೆದಿರುತ್ತಾರೆ.

2. ನಾನು ಮೊದಲಿನಂತೆ ಆರೋಗ್ಯವಾಗಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಅಂಗನ್ಯೂನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಯಿಸಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ.  ನಾನು ಯಾವುದೇ ರೀತಿಯ ಮೆಡಿ ಕ್ಲೈಮ್ ಪಾಲಸಿಗಳನ್ನು ಮಾಡಿಸಿರುವುದಿಲ್ಲ. ನನ್ನ ಚಿಕಿತ್ಸೆಗೋಸ್ಕರ ರೂ.5 ಲಕ್ಷ ಖರ್ಚಾಗಿರುವುದಿಲ್ಲ ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧಪಟ್ಟ ಅಷ್ಟು ಬಿಲ್ಲುಗಳನ್ನು ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಯ ಬಿಲ್ಲುಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಮುಂದುವರೆದ ಚಿಕಿತ್ಸೆಗಾಗಿ ರೂ.5 ಲಕ್ಷ ಅವಶ್ಯಕತೆ ಇದೆ ಎಂದು ಯಾವುದೇ ವೈದ್ಯರು ದಾಖಲೆ ಕೊಟ್ಟಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಆದರೆ ಮೌಖಿಕವಾಗಿ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ.

3. ನಾನು ಭತ್ತ ಕಟಾವು ಮಾಡುವ ಮಷಿನ್‌ಗಳ ಸ್ಪೆಸ್ ಸರ್ವೀಸ್ ಮಾಡುತ್ತಿದ್ದೆ. ಕಿರಣ ಆಗ್ರೋ ಸ್ಪೆಸ್ ಆ್ಯಂಡ್ ಸರ್ವಿಸ್ ಇದು ನನ್ನ ಮಾಲೀಕತ್ವದಲ್ಲಿ ಇರುತ್ತದೆ. ಕಿರಣ ಆಗ್ರೋ ಸ್ಪೆಸ್ ಆ್ಯಂಡ್ ಸರ್ವಿಸ್ ಇದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನಾನು ತಿಂಗಳಿಗೆ

ರೂ.1,35,000/- ದುಡಿಯುತ್ತಿರಲಿಲ್ಲ ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು 2020-21 ನೇ ಸಾಲಿನ ಆದಾಯ ತೆರಿಗೆಯನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಅಪಘಾತವು 2024 ರಲ್ಲಿ ಸಂಭವಿಸಿದ್ದರಿಂದ 2020-21 ನೇ ಸಾಲಿನ ಆದಾಯ ತೆರಿಗೆಯನ್ನು ಪರಿಗಣಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದಾಗೀ ನನ್ನ ಆದಾಯದಲ್ಲಿ ಯಾವುದೇ ವ್ಯತ್ಯಾಸ ಆಗಿಲ್ಲ ಎಂದರೆ ಸರಿಯಲ್ಲ.

4. ಎದುರುದಾರರ ನಂ.2 ರವರಿಗೆ ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಎದುರುದಾರ ನಂ.1 ಇವರ ಮಾಲೀಕತ್ವದ ಲಾರಿ ಸಂಖ್ಯೆ ಟಿ.ಎಸ್ 05 ಯುಸಿ 1229 ವಾಹನಕ್ಕೆ ಫಿಟನೆಸ್ ಸರ್ಟಿಫಿಕೆಟ್ ಹಾಗೂ ಪರ್ಮಿಟ್ ಹಾಗೂ ವಾಹನಕ್ಕೆ ಸೂಕ್ತವಾದ ದಾಖಲೆಗಳು ಇರದ ಕಾರಣ ಎದುರುದಾರ ನಂ.3 ಇವರು ಪರಿಹಾರ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ಎದುರುದಾರ ನಂ.1 ಮತ್ತು 2 ಮೋ.ವಾ. ಕಾಯ್ದೆ ಮತ್ತು ವಿಮಾ ಶರತ್ತುಗಳನ್ನು ಉಲ್ಲಂಘನೆ ಮಾಡಿದ ಕಾರಣ ಎದುರುದಾರ ನಂ.3 ಇವರು ಪರಿಹಾರ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು